

# ಪುಟ್ಟಿ ಪದ್ಯಗಳು

## ರಾಜೇಶ್ವರಿ ಮಯ್ಯ, ಬಲ್ಲೇರಿ

ಕಲೆ: ಸಂತೋಷ್ ಸಸಿಹಿತ್ಲು

ತುಳ್ಸೀಕಟ್ಟೆ ಮೇಲೆ ಕೂತ ಕಾಗೆ
ಮಾಡೋದಾದ್ರೂ ಏನು?
ಹೇಳ್ತಾಳ್ ಕೇಳಿ ನಮ್ಮ್ ಪುಟ್ಟಿ
ಬಗ್ಗೀ ಬಗ್ಗೀ ಮಾಡ್ತಾ ಇದೆ ಅದು ನಮಸ್ಕಾರಾನೂ

ಹೇ ಇರುವೆ ಏನ್ ಮಾಡ್ತೀ
ಪುಟ್ಟೀ ಗಲ್ಲದ್ ಮೇಲೆ
ತಪ್ಪಾಯ್ತಕ್ಕ ನಾನಂದ್ಕೊಂಡೆ
ನಾ ಕೂತಿದ್ದ್ ಬೆಲ್ಲದ್ ಮೇಲೆ!

ಹೂವಿನ ಮೇಲೆ ಕೂತ ಚಿಟ್ಟೆ
ಎಂಥ ಟಾಕು ಟೀಕು
ನನ್ನ ಹಾಗೇ ಚಂದ ಮಾಡಿ
ತೊಟ್ಟಿದೆ ಬರ್ತ್‌ಡೆ ಫ್ರಾಕು!

ನೋಡಿ ನಮ್ಮ್ ಪುಟ್ಟೀಗೆ
ಎಂಥ ಪವರ್ರು...!
ಅವ್ಳ ಹಾಡಿಗೆ ಕುಣಿಯಲೇ ಬೇಕು
ಅಜ್ಜಾ ಅಜ್ಜೀ ಎಲ್ಲಾರೂ!




## ಕುಂಚ ಪ್ರಪಂಚ


ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:**
editorsu@sudha.co.in



**ಭೂಮಿಕಾ ಎಂ.**
6ನೇ ತರಗತಿ, ಎನ್‌ಪಿಎಸ್, ಬೆಂಗಳೂರು





**ಇಂಚರ ವರ್ಣೇಕರ್**
3ನೇ ತರಗತಿ, ಬಿಆರ್‌ವಿ ಸ್ಕೂಲ್, ಶೃಂಗೇರಿ





**ಅಜಿತ್ ಜಿ.ಎಸ್.**
4ನೇ ತರಗತಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಂಚಲದೊರೆ, ಗುಬ್ಬಿ ತಾಲ್ಲೂಕು

